ಸರಕು ತೆಗೆದುಕೊಂಡು ಬಂದರೆ ಅವರಿಗೆ ಆಗುವ ಹಿಂಸೆಯನ್ನು ಹೇಳಲು ಸಾಧ್ಯವಿಲ್ಲ. ಕಡೆಗೆ ನಾವು ಏಕಪ್ಪ ತಂದೆವು ಎನ್ನುವ ಪರಿಸ್ಥಿತಿ ಬಂದು ಬಿಟ್ಟಿದೆ. ಕಡೆಗೆ ದುಡ್ಡು ಬೇಡ ಏನೂ ಬೇಡ ಹೊರಟು ಹೋಗೋಣ ಎನ್ನುವ ಪರಿಸ್ಥಿತಿ ಬರುತ್ತದೆ. ಅವರು ಟೆಂಪೋ, ಲಾರಿಯಿಂದ ಇಳಿಸಿದ ತಕ್ಷಣ ಅವರ ಕಷ್ಟ ಪ್ರಾರಂಭವಾಗುತ್ತದೆ. ಇದೆಲ್ಲವನ್ನೂ ನಿಗ್ರಹಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂದು ತಿಳಿಸಬೇಕು.

ಶ್ರೀ ಎಚ್. ನಾಗಪ್ಪ : ಮಾನ್ಯ ಅಧ್ಯಕ್ಷರೆ, ಇಂತಹ 410 ಪ್ರಕರಣಗಳು ನಮ್ಮ ಗಮನಕ್ಕೆ ಬಂದಿವೆ. ಅವರಿಗೆ ನಾವು ದಂಡ ಹಾಕಿ 2ಲಕ್ಷ 5ಸಾವಿರ ರೂ. ಸಂಗ್ರಹ ಮಾಡಿ ರೈತರಿಗೆ ವಾಪಸ್ಸು ಕೊಟ್ಟಿದ್ದೇವೆ. ಇನ್ನೂ ಅಂತಹ ಪ್ರಕರಣಗಳು ಇದ್ದರೆ ಅವುಗಳ ಪಟ್ಟಿಯನ್ನು ದಯಮಾಡಿ ಕಳುಹಿಸಿ ಕೊಟ್ಟರೆ ಅವುಗಳ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿ ಸಮಸ್ಯೆಗಳು ಇವೆ. ಅದನ್ನು ಗಮನಿಸಿ ಸರ್ಕಾರ ನಿರ್ದಿಷ್ಟವಾದ, ಸೂಕ್ತವಾದ ಕ್ರಮ ತೆಗೆದುಕೊಂಡರೆ ಮಾತ್ರ ಸಾಧ್ಯವಾಗುತ್ತದೆ. ಎಲ್ಲಾ ಪ್ರದೇಶಗಳಲ್ಲಿ ಒಂದೇ ತರಹ ಇಲ್ಲ. ಇದರ ಬಗ್ಗೆ ಸರ್ಕಾರ ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕು.

ತಾಲ್ಲೂಕುಗಳಲ್ಲಿ ನಾಡ ಕಛೇರಿಗಳ ಪ್ರಾರಂಭ.

574 - ಶ್ರೀ ಯು. ಆರ್. ಸಭಾಪತಿ (ಉಡುಪಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ರಾಜ್ಯದ ಎಲ್ಲಾ ತಾಲ್ಲೂಕಿನ ಕಂದಾಯ ಹೋಬಳಿಗಳಲ್ಲಿ ನಾಡ ಕಛೇರಿಯನ್ನು ತೆರೆಯುವ ಆಲೋಚನೆಯು ಸರ್ಕಾರದವರ ಮುಂದಿದೆಯೇ?*

2) *ತುರ್ತು ಪರಿಸ್ಥಿತಿಗಳಲ್ಲಿ ಇತರ ಇಲಾಖಾ ಕೆಲಸಗಳನ್ನು ಕಂದಾಯ ಇಲಾಖೆಯ ಸಿಬ್ಬಂದಿಗಳಿಂದ ಮಾಡಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

1) ರಾಜ್ಯದ ಎಲ್ಲಾ ತಾಲ್ಲೂಕುಗಳ ಹೋಬಳಿಗಳ ಪೈಕಿ ಈಗಾಗಲೇ 329 ನಾಡ ಕಛೇರಿಗಳನ್ನು ಪ್ರಾರಂಭಿಸಲಾಗಿದೆ. ಇನ್ನು ಕೆಲವು ನಾಡ ಕಛೇರಿಗಳನ್ನು ಪ್ರಾರಂಭಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

2) ಹೌದು.

ಶ್ರೀ ಯು. ಆರ್. ಸಭಾಪತಿ : ಮಾನ್ಯ ಅಧ್ಯಕ್ಷರೆ, ನಾಡ ಕಛೇರಿಗಳ ಸ್ಥಾಪನೆ ಬಗ್ಗೆ ನಾನು ಪ್ರಶ್ನೆಯನ್ನು ಕೇಳಿದೆ. 329 ನಾಡ ಕಛೇರಿಗಳನ್ನು ಸ್ಥಾಪಿಸಿದ್ದೇವೆ ಎಂದು ಹೇಳಿದ್ದಾರೆ. ಈಗಾಗಲೇ ಇರತಕ್ಕಂತಹ ನಾಡ ಕಛೇರಿಗಳಲ್ಲಿ ಒಬ್ಬ ಡೆಪ್ಯುಟಿ ತಹಸೀಲ್ದಾರ್, ಒಬ್ಬ ಕ್ಲರ್ಕ್, ಒಬ್ಬ ಅಟೆಂಡರ್

ಇರುತ್ತಾರೆ, ಆದರೆ ಸಮಸ್ಯೆ ಎಂದರೆ ಈ ನಾಡ ಕಛೇರಿ ಇರಲಿ, ಕಂದಾಯ ಇಲಾಖೆ ತಾಲ್ಲೂಕು ಕಛೇರಿ ಇರಲಿ, ಎಲ್ಲಾ ಸಿಬ್ಬಂದಿಗಳಿಗೆ ಸ್ಪೆಷಲ್ ಡ್ಯೂಟಿ, ಜಾನುವಾರಗಳ ಗಣತಿ ಅವರಿಗೆ, ಕೃಷಿ ಗಣತಿಯೂ ಅವರಿಗೆ, ಈಗ ಹೊಸದಾಗಿ ಬಾಲ ಕಾರ್ಮಿಕರ ಸರ್ವೇ ಮಾಡುವುದು ಅವರಿಗೆ, ಇದೆಲ್ಲಾ ಆದ ಮೇಲೆ ಜನ ಗಣತಿಯಂತೂ ಇದ್ದೇ ಇದೆ. ಇದೆಲ್ಲಾ ಆಗುವಷ್ಟರಲ್ಲಿ ಚುನಾವಣೆ ಬರುತ್ತವೆ. ಆಗ ತಾಲ್ಲೂಕ್ ಕಛೇರಿ ಬಂದ್ ಆಗಿರುತ್ತದೆ. ಈಗ ಇರತಕ್ಕಂತಹ ತಾಲ್ಲೂಕ್ ಕಛೇರಿಯ ಸಿಬ್ಬಂದಿಗಳ ಸಂಖ್ಯೆಯು ಕಡಿಮೆ ಇದೆ, ಕಂದಾಯ ಇನ್ಸ್‌ಪೆಕ್ಟರ್‌ಗಳು, ವಿಲೇಜ್ ಅಕೌಂಟೆಂಟ್ ತಮ್ಮ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡುವುದನ್ನು ಬಿಟ್ಟು ಈ ಗಣತಿ ಕೆಲಸ ಮಾಡುವುದಾದರೆ, ಈ ಗಣತಿ ಕೆಲಸಕ್ಕೆ ಪ್ರತ್ಯೇಕವಾದ ವಿಭಾಗವನ್ನು ಏಕೆ ನೀವು ತೆಗೆಯಬಾರದು? ಇದರ ಬಗ್ಗೆ ಸಾಕಷ್ಟು ಗಮನ ಕೊಟ್ಟಿದ್ದೀರೋ? ಈಗ ನಿಮ್ಮ ಕಂದಾಯ ಇಲಾಖೆಯಲ್ಲಿ ಇರತಕ್ಕಂತಹ ಸಿಬ್ಬಂದಿ ವರ್ಗದವರು ಕಂದಾಯ ಕೆಲಸ-ಕಾರ್ಯಗಳನ್ನು ಮಾಡಲು ಸಾಧ್ಯ ಇದೆಯೋ? ಅದನ್ನು ತಾವು ಪರಿಶೀಲನೆ ಮಾಡಿದ್ದೀರೋ?

ಶ್ರೀ ರಮೇಶ. ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೆ, ಈ ಗಣತಿ ಮಾಡುವುದಾಗಲಿ ಅಥವಾ ಆಹಾರ ಇಲಾಖೆಯ ಕೆಲಸ ಮಾಡುವುದರಿಂದ ಅಧಿಕಾರಿಗಳಿಗೆ ತೊಂದರೆಯಾಗಿದೆ ಎಂದು ನನಗೇನೂ ವೈಯಕ್ತಿಕವಾಗಿ ಅನ್ನಿಸಿಲ್ಲ, ಮತ್ತು ನನ್ನ ಹತ್ತಿರ ಯಾರೂ ದೂರು ಕೊಟ್ಟಿಲ್ಲ. ಒಂದು ವೇಳೆ ಈ ಕಂದಾಯ ಅಧಿಕಾರಿಗಳಿಗೆ ಕೆಲಸ ಜಾಸ್ತಿಯಾಗಿದೆ, ಬಹಳ ತೊಂದರೆಯಾಗಿದೆ ಎಂದು ಹೇಳಿ ಗಮನಕ್ಕೆ ಬಂದರೆ ಸರ್ಕಾರದವರು ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಯು. ಆರ್. ಸಭಾಪತಿ : ಅಧ್ಯಕ್ಷರೇ, ಸಾಕಷ್ಟು ರೆಪ್ರೆಸೆಂಟೇಷನ್ ಈ ಬಗ್ಗೆ ಕೊಡಲಾಗಿದೆ. ಇದಲ್ಲದೆ ಮಂತ್ರಿಗಳೇನಾದರೂ ಬಂದುಬಿಟ್ಟರೆ ಈ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ಮತ್ತು ಗ್ರಾಮ ಲೆಕ್ಕಿಗರಿಗೆ ಈ ಮಂತ್ರಿಗಳಿಗೆ ಊಟ ಮತ್ತು ತಿಂಡಿಯನ್ನು ತರಿಸುವುದೇ ಇವರ ಮುಖ್ಯ ಕೆಲಸವಾಗಿಬಿಡುತ್ತದೆ, ಇವರು ಐ.ಬಿ.ಯಲ್ಲಿ ಇರುತ್ತಾರೆ. ಇದನ್ನು ನಾನು ಪ್ರತ್ಯಕ್ಷ ನೋಡುತ್ತಿದ್ದೇನೆ. ಈ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳು ಮತ್ತು ವಿಲೇಜ್ ಅಕೌಂಟೆಂಟ್‌ಗಳು ನಮ್ಮ ಐ.ಬಿ. ಯಲ್ಲೇ ಇರುತ್ತಾರೆ, ಏಕೆ ಎಂದು ಕೇಳಿದರೆ ಮಂತ್ರಿಗಳು ಬರುತ್ತಾರೆ, ಅವರಿಗೆ ಊಟದ ವ್ಯವಸ್ಥೆ, ತಿಂಡಿಯ ವ್ಯವಸ್ಥೆ ಮಾಡಬೇಕೆಂದು ಹೇಳುತ್ತಾರೆ. ನಾವು ಇದರ ಬಗ್ಗೆ ಈ ಜನಗಣತಿ, ಕೃಷಿ ಗಣತಿ ಬೇರೆ ಯಾವುದೇ ಗಣತಿ ಕೆಲಸಗಳು ಇದ್ದರೆ ಅದನ್ನು ಈ ರೆವಿನ್ಯೂ ಅಧಿಕಾರಿಗಳಿಗೆ ವಹಿಸಿಕೊಡಬೇಡಿ, ಅದರ ಬಗ್ಗೆ ಬೇರೆ ವ್ಯವಸ್ಥೆಯನ್ನು ಮಾಡಿ ಎಂದು ನಾವು ಬೇಕಾದಷ್ಟು ಮನವಿಗಳನ್ನು ಕೊಟ್ಟಿದ್ದೇವೆ. ಆದರೆ ಮಂತ್ರಿಗಳು ಹೇಳುತ್ತಾರೆ ಇದು ನಮ್ಮ ಗಮನಕ್ಕೇ ಬಂದಿಲ್ಲವೆಂದು. ಇದು ನನಗೇನೋ ಸರಿ ಕಾಣುತ್ತಿಲ್ಲ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಅಧ್ಯಕ್ಷರೇ, ಸಭಾಪತಿಯವರು ಮಾತನಾಡುತ್ತಾ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳಿಗೆ ಮತ್ತು ವಿಲೇಜ್ ಅಕೌಂಟೆಂಟ್‌ಗಳಿಗೆ ಮಂತ್ರಿಗಳು ಬಂದಾಗ ಅವರಿಗೆ ಊಟ-ತಿಂಡಿ ವ್ಯವಸ್ಥೆಯನ್ನು ಮಾಡುವುದೇ ಒಂದು ಹೆಚ್ಚಿನ ಕೆಲಸವಾಗಿದೆಯೆಂದರು.

ಅಧ್ಯಕ್ಷರು : ಅವರು ರೆವಿನ್ಯೂ ಮಂತ್ರಿ ಎಂದು ಹೇಳಲಿಲ್ಲ. ಸಾಮಾನ್ಯವಾಗಿ ಮಂತ್ರಿಗಳು ಬಂದಾಗ ಮಾತ್ರ ಎಂದು ಹೇಳಿದರು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಸಾಮಾನ್ಯವಾಗಿ ಮಂತ್ರಿಗಳು ಬಂದಾಗ ಅಂದರೆ ಅದೇನೋ ನನಗೆ ಗೊತ್ತಿಲ್ಲ. ಆದರೆ ನಾನು ಅಲ್ಲಿಗೆ ಹೋದಾಗ ಮಾತ್ರ ಆ ಅಧಿಕಾರಿಗಳಿಗೆ ನೀವು ಬಂದು ನನಗೆ ಊಟ-ತಿಂಡಿ ವ್ಯವಸ್ಥೆ ಮಾಡಿ ಎಂದೂ ಯಾವತ್ತೂ ಕೇಳಿಲ್ಲ ಮತ್ತು ಹೇಳಿಯೂ ಇಲ್ಲ. ಆ ರೀತಿ ಹೇಳುವುದೂ ಸರಿಯಲ್ಲ. ಆದರೆ ಅವರು ಇದರಿಂದಲೇ ಜಾಸ್ತಿಯಾಗಿದೆ ಕೆಲಸ ಎಂದು ಏನು ಹೇಳುತ್ತಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ. ಏಕೆಂದರೆ ಇಲ್ಲಿಯವರೆವಿಗೂ ಯಾರೂ ಕೂಡ ನಮಗೆ ಕೆಲಸ ಜಾಸ್ತಿಯಾಗಿದೆಯೆಂದು ಮತ್ತು ಅದನ್ನು ಕಡಿಮೆ ಮಾಡಿಯೆಂದು ಹೇಳಿಲ್ಲ. ಒಂದು ವೇಳೆ ನನ್ನ ಗಮನಕ್ಕೆ ಬಂದು ಕೆಲಸ ಜಾಸ್ತಿಯಾಗಿದೆಯೆನ್ನುವ ಅಂಶ ಕಂಡು ಬಂದರೆ ಅದರ ಬಗ್ಗೆ ಪರಿಶೀಲನೆ ಮಾಡುತ್ತೇನೆ.

ಜಯನಗರ ಕ್ಷೇತ್ರದಲ್ಲಿನ ಕೊಳಚೆ ಪ್ರದೇಶಗಳು.

575 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಜಯನಗರ ವಿಧಾನಸಭಾ ಕ್ಷೇತ್ರಗಳಲ್ಲಿರುವ ಕೊಳಚೆ ಪ್ರದೇಶಗಳೆಷ್ಟು ?

ಆ) ಇವುಗಳ ಪೈಕಿ ಎಷ್ಟು ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ಇದುವರೆಗೆ ಹಕ್ಕುಪತ್ರಗಳನ್ನು ನೀಡಲಾಗಿದೆ ?

ಇ) ಇನ್ನುಳಿದ ನಿವಾಸಿಗಳಿಗೆ ಯಾವಾಗ ಹಕ್ಕು ಪತ್ರಗಳನ್ನು ವಿತರಿಸಲಾಗುವುದು ?

ಶ್ರೀ ಹೆಚ್. ಡಿ. ರೇವಣ್ಣ (ವಸತಿ ಸಚಿವರು) :

ಅ) ಬೆಂಗಳೂರು ನಗರದ ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಒಟ್ಟು 46 ಕೊಳಚೆ ಪ್ರದೇಶಗಳ ಪೈಕಿ ಘೋಷಿತಗೊಂಡ ಕೊಳಚೆ ಪ್ರದೇಶಗಳು 21. ಗುರ್ತಿಸಲ್ಪಟ್ಟವು (ಘೋಷಣೆಯಾಗದಿರುವ) ಕೊಳಚೆ ಪ್ರದೇಶಗಳು 25.

ಆ) ಘೋಷಿತಗೊಂಡ 21 ಕೊಳಚೆ ಪ್ರದೇಶಗಳ ಪೈಕಿ ತಾವರೆಕೆರೆ ಸರ್ವೆ ನಂಬರ್ 5 ಹಾಗೂ ಸರ್ವೆ ನಂ. 7 ರಲ್ಲಿ ಅನುಕ್ರಮವಾಗಿ 172 ಹಾಗೂ 129 ಮನೆಗಳನ್ನು ನಿರ್ಮಿಸಿದ್ದು, ಫಲಾನುಭವಿಗಳಿಗೆ ಹಂಚಿಕೆ ಮಾಡಿ ಹಕ್ಕುಪತ್ರಗಳನ್ನು ನೀಡಲಾಗಿದೆ. ಸೋಮೇಶ್ವರ ನಗರದ ಕೊಳಚೆ ನಿವಾಸಿಗಳಿಗೆ ಹುಡ್ಕೋ ಸಂಸ್ಥೆಯ ಸಾಲದ ನೆರವಿನಿಂದ 100 ಮನೆಗಳನ್ನು ಕಟ್ಟುವ ಕಾಮಗಾರಿಗೆ ಮಂಜೂರಾತಿ ದೊರೆತ್ತಿದ್ದು, 56 ಮನೆಗಳ ನಿರ್ಮಾಣದ ಕಾಮಗಾರಿಯು ವಿದ್ಯುತ್ ಸಂಪರ್ಕವನ್ನು ಹೊರತುಪಡಿಸಿ ಪೂರ್ಣಗೊಂಡಿರುತ್ತದೆ. ಈ ನಿವಾಸಿಗಳು ಮಂಡಳಿಗೆ ಪ್ರಾರಂಭಿಕ ಠೇವಣಿ ಮತ್ತು ನೋಂದಣಿ ಶುಲ್ಕ ಪಾವತಿಸಿದ ನಂತರ ಮನೆಗಳನ್ನು ಹಂಚಿಕೆ ಮಾಡಿ ಹಕ್ಕು ಪತ್ರಗಳನ್ನು ವಿತರಿಸಲಾಗುವುದು. ಉಳಿದ ಘೋಷಿತ ಪ್ರದೇಶಗಳಲ್ಲಿ ವಾಸಿಸುತ್ತಿರುವ ನಿವಾಸಿಗಳಿಗೆ ಗುರುತು ಪತ್ರಗಳನ್ನು ನೀಡಲಾಗಿದೆ.